(ಪಿ.ಡಬ್ಲ್ಯೂ.1) ದಿನಾಂಕಃ 10-11-2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಜಿ.ಆರ್.ಬಿ ವಕೀಲರಿಂದ ಃ

8. ಕೋರ್ಟಿನ ಮುಂದಿರುವ ಆರೋಪಿತರು ನಮ್ಮ ಸಂಬಂಧಿಕರಲ್ಲ. ನನ್ನ ತಂದೆಯ ಹೆಸರು ಗೋವಿಂದಪ್ಪ. ನಮ್ಮ ತಂದೆಗೆ ಇಬ್ಬರು ಹೆಂಡರು ಎಂದರೆ ಸರಿ. ಮೊದಲನೇ ಹೆಂಡತಿ ನಮ್ಮ ಅಮ್ಮ ಮಸಿಯಮ್ಮ. ಎರಡನೇ ಹೆಂಡತಿ ಮಲ್ಲಮ್ಮ.

9. ಮಸಿಯಮ್ಮಳಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ಮಲ್ಲಮ್ಮಳಿಗೆ ಹಣಮವ್ವ ಒಬ್ಬಳೇ ಮಗಳು ಎಂದರೆ ಸರಿ. ಹಣಮವ್ವ ಈಕೆಯನ್ನು ಲಗ್ನ ಮಾಡಿ ಮನೆಯಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿ. ಆಕೆಯ ಗಂಡನ ಹೆಸರು ನರಸಪ್ಪ.

10. ನರಸಪ್ಪನಿಗೂ ಕೂಡಾ ಇಬ್ಬರು ಹೆಂಡತಿಯರು. ನರಸಪ್ಪನಿಗೆ ಭೀಮಣ್ಣ ಒಬ್ಬನೇ ಮಗ ಎಂದರೆ ಸರಿ. ಭೀಮಣ್ಣನ ಮಕ್ಕಳೆ ಈ ಪ್ರಕರಣದ 1ನೇ ಆರೋಪಿ ಆಂಜನೇಯ ಮತ್ತು 2ನೇ ಆರೋಪಿ ಸಾಬಣ್ಣ ಎಂದರೆ ಸರಿ. ಮತ್ತೊಬ್ಬ ಮಗನ ಹೆಸರು ದೊಡ್ಡ ಸಾಬಣ್ಣ ಇದೆ. ನನಗೆ ಇಬ್ಬರು ಮಕ್ಕಳು ಅವರ ಹೆಸರು ಮೃತ ತಿಮ್ಮಣ್ಣ ಮತ್ತು ಮಸಿಯಮ್ಮ.

11. ಎಲ್ಲಾ ಆಸ್ತಿಗಳು ನಮ್ಮ ಮತ್ತು ಭೀಮಣ್ಣನ ನಡುವೆ ಜಂಟಿಯಾಗಿವೆ ಎಂದರೆ ಸರಿ. ಆರೋಪಿತರು ತಮ್ಮ ತಂದೆಯ ಆಸ್ತಿಯನ್ನ ಅವರ ಹೆಸರಿಗೆ ಮಾಡಿ ಕೊಡಲು ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಇಂದಿನವರೆಗೆ ಆರೋಪಿತರ ಹೆಸರಿಗೆ ಮಾಡಿಲ್ಲಾ ಎಂದರೆ ಸರಿ.

12. ಆರೋಪಿತರ ಅಣ್ಣ ದೊಡ್ಡ ಸಾಬಣ್ಣ ಈಗ ತೀರಿಕೊಂಡಿದ್ದಾನೆ ಎಂದರೆ ಸರಿ. 2ನೇ ಆರೋಪಿ ಸಾಬಣ್ಣ ಮನೆಯ ಆಳುತನಕ್ಕೆ ನಾಗಲಾಪೂರ ಗ್ರಾಮಕ್ಕೆ ಹೋಗಿದ್ದಾನೆ ಎಂದರೆ ಸರಿ. ಅವರ ಮನೆಯಲ್ಲೇ 2ನೇ ಆರೋಪಿ ಇರುತ್ತಾನೆ ಎಂದರೆ ಸರಿ.

13. ಘಟನೆ ಆದ ದಿನ ಆರೋಪಿತರ ಅಣ್ಣ ದೊಡ್ಡ ಸಾಬಣ್ಣ ಮಗನ ಎಂಗೇಜಮೇಂಟ್ ಇತ್ತು ಎಂದರೆ ಸರಿಯಲ್ಲ. ಆರೋಪಿತರು ಆ ಎಂಗೇಜ್‌ಮೆಂಟ್‌ನಲ್ಲಿ ಆರೋಪಿತರು ಇದ್ದರು ಎಂದರೆ ಸರಿಯಲ್ಲ.

14. ರಾತ್ರಿ 10.00 ಗಂಟೆಗೆ ನನಗೆ ವಿಚಾರ ಗೊತ್ತಾದ ನಂತರ ನಾನು ಠಾಣೆಗೆ ಅದೇ ದಿವಸ ಹೋಗಿದ್ದೇನೆ. ನಮ್ಮ ಮಗನಿಗೆ ಆರೋಪಿತರು ಹೊಡೆದಿದ್ದಾರೆ ಅಂತಾ ಹೇಳಿ ಫಿರ್ಯಾದು ಕೊಟ್ಟಿದ್ದೇನೆ.

15. ನಾನು ಘಟನಾ ಸ್ಥಳಕ್ಕೆ ಹೋದಾಗ ಕೋರ್ಟಿನ ಮುಂದಿರುವ ಆರೋಪಿತರು ಇದ್ದರು. ನಾನು ಹೋದಾಗ ಸ್ಥಳದಲ್ಲಿ ನನ್ನ ಮಗನ ಶವ ಬಿದ್ದಿತ್ತು. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ಮಗ ಸತ್ತು ಬಿದ್ದಿದ್ದ ಅಂತಾ ನಾನು ಪೋಲೀಸರ ಮುಂದೆ ತಿಳಿಸಿದ್ದೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ಮಗ ಸತ್ತು ಬಿದ್ದಿದ್ದ ಅಂತಾ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ.

16. ನನ್ನ ಮಗನ ಶವವನ್ನು ಪಿಎಂಇ ಮಾಡುವ ಸಲುವಾಗಿ ಆಸ್ಪತ್ರೆಗೆ ಕಳುಹಿಸಿದರು. ನನ್ನ ಮಗನಿಗೆ ಆರೋಪಿತರು ಹೊಡೆದು ದಬ್ಬಿದ್ದನ್ನ ನಾನು ನೋಡಿದ್ದೇನೆ. ನನ್ನ ಮಗನಿಗೆ ಆರೋಪಿತರು

ಹೊಡೆದು ದಬ್ಬಿದ್ದನ್ನ ನಾನು ನೋಡಿದ್ದೇನೆ ಅಂತಾ ನಾನು ಫಿರ್ಯಾದಿಯಲ್ಲಿ ಬರೆದಿಲ್ಲಾ ಎಂದರೆ ಸರಿಯಲ್ಲ.

17. ನನ್ನ ಮಗ ಯಾವಾಗಲು ಮದ್ಯಪಾನ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಯಾವಾಗಲಾದರೂ ಒಮ್ಮೆ ಕುಡಿಯುತ್ತಿದ್ದ ಅಂತಾ ಹೇಳುತ್ತಾರೆ. ನನ್ನ ಮಗ ಕುಡಿದು ಆರೋಪಿತರು ಮತ್ತು ಅವರ ಅಣ್ಣನ ಮೇಲೆ ಜಗಳ ಮಾಡುತ್ತದ್ದ ಎಂದರೆ ಸರಿಯಲ್ಲ.

18. ಘಟನೆಗಿಂತ 08 ದಿವಸ ಮೊದಲು ನನ್ನ ಮಗ ಮತ್ತು ಗಂಗನ ಹೊಟೆಲನಲ್ಲಿ ಶಂಕ್ರಪ್ಪನ ಜೊತೆ ಜಗಳ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬಾಯಿ ಮಾತಿನ ಜಗಳ ಆಗಿತ್ತು ಅಂತಾ ಹೇಳುತ್ತಾರೆ.

19. ನನ್ನ ಮಗ ಮದ್ಯಪಾನ ಮಾಡಲು ಹಣ ಕೇಳುತ್ತಿದ್ದು ಅವರ ವಿರುದ್ದ ಜಗಳ ಆಡುತ್ತಿದ್ದ ಎಂದರೆ ಸರಿಯಲ್ಲ.

20. ಯಾದಗಿರಿನಿಂದ ರಾಯಚೂರಿಗೆ ಹೋಗುವ ರಸ್ತೆಯ ಮದ್ಯ ನಮ್ಮ ಊರಿಗೆ ಹೋಗಬೇಕಾದರೆ ಬಳಿಚಕ್ರದಿಂದ ಒಳಗೆ ಹೊಗಬೇಕಾದರೆ ಸಿಸಿ ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯ ಎರಡು ಬದಿಗಳಲ್ಲಿ ಮೋರಿಗಳು ಇವೆ ಎಂದರೆ ಸರಿ.

21. ಬಳಿಚಕ್ರದಲ್ಲಿ ಹಳೆ ಬ್ಯಾಂಕ ಬಳಿ ಬಸವರಾಜರವರಿಗೆ ಸೇರಿದ ಒಂದು ಕಿರಾಣಿ ಅಂಗಡಿ ಇದೆ ಎಂದರೆ ಸರಿ. ನನ್ನ ಮಗ ಆ ದಿನ ರಸ್ತೆಗೆ ಕುಡಿದೆ ಹೊರಟಿದ್ದ ಎಂದರೆ ಸರಿಯಲ್ಲ. ಆ ರೀತಿ ಕುಡಿದು ಹೋಗಬೇಕಾದರೆ ಮೋರಿಗೆ ಬಿದಿದ್ದಾನೆ ಎಂದರೆ ಸರಿಯಲ್ಲ. ನಾವು ನಮ್ಮ ಮಗನನ್ನು ಕರೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗ ಮನೆಗೆ ಬಂದು ಊಟ ಮಾಡಿದ ಎಂದರೆ ಸರಿಯಲ್ಲ. ಮುಂಜಾನೆ ನನ್ನ ಮಗ ಎದಿದ್ದಾನೆ ಎಂದರೆ ಸರಿಯಲ್ಲ. ಬೆಳಿಗ್ಗೆ ಎದ್ದು ನನ್ನ ಮಗ ಬರ್ಹಿದೆಸೆಗೆ ಹೋಗಿದ್ದ ಎಂದರೆ ಸರಿಯಲ್ಲ. ಬರ್ಹಿದೆಸೆಗೆ ಹೋಗಿ ಬರುವಾಗಲೂ ಕೂಡಾ ನನ್ನ ಮಗ ಕುಡಿದು ಬಂದಿದ್ದ ಎಂದರೆ ಸರಿಯಲ್ಲ. ನಂತರ ನನ್ನ ಮಗ ಸ್ನಾನ ಮಾಡಿದ ಎಂದರೆ ಸರಿಯಲ್ಲ. ಸ್ನಾನ ಮಾಡಬೇಕಾದರೆ ನನ್ನ ಮಗ ಮನೆಯ ಬಚ್ಚಲಲ್ಲಿ ಕಾಲು ಜಾರಿ ಬಿದಿದ್ದಾನೆ ಎಂದರೆ ಸರಿಯಲ್ಲ.

22. ನನ್ನ ಮಗನಿಗೆ ಆರೋಪಿತರು ಹೊಡೆದಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗ ಬಚ್ಚಲಲ್ಲಿ ಜಾರಿ ಬಿದಿದ್ದು ಆರೋಪಿತರ ವಿರುದ್ದ ಸುಳ್ಳು ಫಿರ್ಯಾದು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನ್ನ ಮಗನನ್ನು ದಬ್ಬಿದ್ದಾರೆ ಅಂತಾ ನಾನು ಸುಳ್ಳು ಸಾಕ್ಷ್ಯಾ ಕೊಟ್ಟಿದ್ದೇನೆಂದರೆ ಸರಿಯಲ್ಲ.

23. ಯಾವುದೇ ಘಟನೆ ಆಗಿಲ್ಲಾ ಎಂದರೆ ಸರಿಯಲ್ಲ. ಆದರೂ ಕೂಡಾ ಆರೋಪಿತರ ಮೇಲೆ ಸುಳ್ಳು ಕೇಸ್ ದಾಖಲು ಮಾಡಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೆ ನಮ್ಮ ಆಸ್ತಿಯಲ್ಲಿ ಸಂಬಂಧ ಇದ್ದರೂ ಕೂಡಾ ಸಂಬಂಧ ಇಲ್ಲಾ ಅಂತಾ ಸುಳ್ಳು ಸಾಕ್ಷ್ಯಾ ಕೊಟ್ಟಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ. ಹೇ. ಕೇ. ಸ. ಇದೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

**(ಪಿ.ಡಬ್ಲ್ಯೂ.2) ದಿನಾಂಕಃ 10-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಜಿ.ಆರ್.ಬಿ ವಕೀಲರಿಂದ ಃ**

3. ನನ್ನ ತಾಯಿ ಮತ್ತು ಶರಣಪ್ಪನ ಹೆಂಡತಿ ಅಕ್ಕ ತಂಗಿಯವರು ಎಂದರೆ ಸಾಕ್ಷಿ ದೂರದ ಸಂಬಂಧಿಗಳು ಅಂತಾ ಹೇಳುತ್ತಾರೆ.

4. ಶರಣಪ್ಪ ಫಿರ್ಯಾದಿಯ ಅಂಗಳನ್ನು ಹೇಳಿ ಬರೆಸಿಲ್ಲಾ ಎಂದರೆ ಸರಿಯಲ್ಲ. ನಾನೇ ಫಿರ್ಯಾದನ್ನ ಸ್ವತಃ ಬರೆದು ಶರಣಪ್ಪನ ಸಹಿ ಮಾಡಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ. ಹೇ. ಕೇ. ಸ. ಇದೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

Win2PDF®

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/